**<u>ದಿನಾಂಕಃ 01.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ. ಎಲ್ ಎ ವಕೀಲರಿಂದಃ-</u>

ನನ್ನ ತಾತದಿಗೆ 6 ಜನ ಮಕ್ಕಳು. ಅವರಲ್ಲಿ 4 ಜನ ಹೆಣ್ಣು ಮಕ್ಕಳು, ನನ್ನ ತಂದೆಯೂ ಸೇರಿ 2 ಜನ ಗಂಡು ಮಕ್ಕಳು. ನನ್ನ ದೊಡ್ಡಪ್ಪನ ಹೆಸರು ಆರೆಕಲ್ಲಯ್ಯ. ದಾವಾ ಆಸ್ತಿಯನ್ನು ಹೊರತುಪಡಿಸಿ ತಮ್ಮ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಯಾವ್ಯಾವು ಎಂದರೆ ಸಾಕ್ಷಿಯು ಸರ್ವೆ ನಂಬರ್ 81/2 ರ ಆಸ್ತಿ ಎನ್ನುತ್ತಾರೆ. ಸರ್ವೆ ನಂಬರ್ 81/2 ರಲ್ಲಿ ಮೂಲ ಎಷ್ಟು ವಿಸ್ತೀರ್ಣದ ಆಸ್ತಿ ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.5 ವಿಭಾಗ ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ನನ್ನ ತಾಯಿಯ ಹೆಸರಿಗೆ ದಾವಾ ಆಸ್ತಿಯ ಸ್ವತ್ತನ್ನು ಖಾತೆ ಮಾಡಿಸಿಕೊಂಡಿದ್ದನ್ನು ವಜಾಪಡಿಸಿ ಎಸಿ ನ್ಯಾಯಾಲಯ ಆದೇಶ ಮಾಡಿತ್ತೆಂದರೆ ಸರಿ. ಎಸಿ ನ್ಯಾಯಾಲಯದ ಆದೇಶದಂತೆ ತಹಶೀಲ್ದಾರ್ ರವರು ನನ್ನ ತಾಯಿಯ ಹೆಸರಿಗೆ ಇದ್ದ ದಾವಾ ಆಸ್ತಿಯ ಖಾತೆಯನ್ನು ರದ್ದುಪಡಿಸಿ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಪಹಣಿ ಪತ್ರಿಕೆಗಳೇ ಬೇರೆ ಬೇರೆ ಎನ್ನುತ್ತಾರೆ. ಸರ್ವೆ ನಂಬರ್ 81/2 ರ ಆಸ್ತಿ ಪೋಡಿ ಆಗಿ ಸರ್ವೆ ನಂಬರ್ 81/3 ಮತ್ತು 81/4 ಎಂದು ಹೊಸದಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 81/2 ಮತ್ತು ಸರ್ವೆ ನಂಬರ್ 81/3, 81/4 ಬೇರೆ ಬೇರೆ ಆಸ್ತಿಗಳು ಎಂದು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಎಸಿ ನ್ಯಾಯಾಲಯದಿಂದ ನಮಗೆ ಯಾವುದೇ ನೋಟೀಸು ಬಂದಿಲ್ಲ ಎನ್ನುತ್ತಾರೆ.

ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ನಾನು ಮತ್ತು ನನ್ನ ಕುಟುಂಬದ ಸದಸ್ಯರು ದಾವಾ ಅಸ್ತಿಯ ಹಕ್ಕುದಾರರಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನಲ್ಲಿ 2 ಪ್ರತ್ಯೇಕ ಸರ್ವೆ ನಂಬರ್ ಮತ್ತು ವಿಸ್ತೀರ್ಣಗಳಿದ್ದು ಎರಡು ಷೆಡ್ಯೂಲ್ ಗಳಿಗೂ ಒಂದೇ ಚೆಕ್ಕು ಬಂದಿ ನಮೂದಾಗಿದೆ ಎಂದರೆ ಸರಿ. ದಾವಾ ಆಸ್ತಿ ಒಂದೇ ಚೆಕ್ಕು ಬಂದಿ ಆಗಿರುವುದರಿಂದ ದುರಸ್ತಿ ಮಾಡಿ ಸರ್ವೆ ನಂಬರ್ 81/2 ರ ಆಸ್ತಿಯನ್ನು ಮೂಲ ಖಾತೆದಾರರಾದ ವೆಂಕಟಪ್ಪ ರವರ ಹೆಸರಿಗೆ ಖಾತೆ ಕೂಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಖಾತೆಯನ್ನು ಅವರೇ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ನಿಪಿ 18 ದೃಢೀಕೃತ ಕ್ರಯಪತ್ರವನ್ನು ನಾನೇ ಹಾಜರುಪಡಿಸಿದ್ದು ನನ್ನ ತಂದೆ 1 ನೇ ಪ್ರತಿವಾದಿಯ ತಂದೆಗೆ ಸರ್ವೆ ನಂಬರ್ 81/2 ರ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ದಾವಾಸರ್ವೆ ನಂಬರ್ ಆಸ್ತಿಗಳಿಗೆ ಸಂಬಂದಿಸಿದಂತೆ ನನ್ನ ತಂದೆ ಮತ್ತು ತಾತನ ಹೆಸರಿಗೆ ಇರುವ ಪಹಣಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸರ್ವೆ ನಂಬರ್ 81/2 ರ ಆಸ್ತಿ ದುರಸ್ತಿ ಆಗಿರುವ ವಿಚಾರವನ್ನು ಮರೆ ಮಾಚಲು ನನ್ನ ತಂದೆ ಮತ್ತು ತಾತನ ಹೆಸರಿಗೆ

ಇರುವ ಪಹಣಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿಃ 01.08.2018 ರಂದು ದಾವಾ ಆಸ್ತಿಯ ಖಾತೆಗಳನ್ನು ನನ್ನ ತಾಯಿಯ ಹೆಸರಿಗೆ ಕಾನೂನು ಬಾಹಿರವಾಗಿ ಈ ಹಿಂದೆ ಕಂದಾಯ ಪ್ರಾಧಿಕಾರದಲ್ಲಿ ತಿದ್ದುಪಡಿ ಆದೇಶದ ಮೇಲೆ ಖಾತೆ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ತಿದ್ದುಪಡಿ ಆದೇಶ ಆದ ಬಗ್ಗೆ ಪ್ರತಿವಾದಿಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಹೂಡುವ ಪೂರ್ವದಲ್ಲಿ ಅಂದರೆ 2016 -17 ರ ಪೂರ್ವದಲ್ಲಿ ಪ್ರತಿವಾದಿಯರು ಮತ್ತು ನಮ್ಮ ಕುಟುಂಬಕ್ಕೆ ದಾವಾ ಆಸ್ತಿಗಳ ಸಂಬಂಧ ವ್ಯಾಜ್ಯ ಇತ್ತು ಎಂದರೆ ಸರಿ. ಎ ಸಿ ನ್ಯಾಯಾಲಯದಲ್ಲಿ ವ್ಯಾಜಹ್ಯ ಇದ್ದಾಗಲೇ ದಾವಾ ಆಸ್ತಿಗಳ ಹಕ್ಕಿನ ಸಂಬಂಧ ಪ್ರತಿವಾದಿಯರು ಮತ್ತು ನಮ್ಮ ಕುಟುಂಬಕ್ಕೆ ವ್ಯಾಜ್ಯ ಇತ್ತು ಎಂದರೆ ಸರಿ. ದಾವಾ ಆಸ್ತಿಗಳು ಪ್ರತಿವಾದಿಯರಿಗೆ ಸೇರತಕ್ಕದ್ದು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಹೇಳಿರುವ ಅಂಶಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಕ್ರಯಪತ್ರದ ಆಧಾರದ ಮೇಲೆ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದರೂ ಖಾತೆಗಳು ನನ್ನ ತಾತನ ಹೆಸರಿಗೆ ದುರುಪಯೋಗ ಪಡಿಸಿಕೊಂಡು ಅಕ್ರಮ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ